OS 242/2014
PW:01

ನವೀನ್ ಕುಮಾರ್ ಆರ್

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 14-11-2022**

**ಪಾಟೀ ಸವಾಲು : ಶ್ರೀ ಟಿ.ಕೆ.ವಿ 2 ನೇ ಪ್ರತಿವಾದಿ ಪರ ವಕೀಲರಿಂದ**

ವಾದಿಯು ಈ ದಾವೆಯನ್ನು ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗಬರಬೇಕೆಂದು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಸಲ್ಲಿಸಿದ್ದಾರೆ. ಪಿತ್ರಾರ್ಜಿತ ಆಸ್ತಿಗಳಲ್ಲಿ ಸರ್ವೆ ನಂಬರ್ 56/2 ಮತ್ತು ಮನೆ ಸ್ವತ್ತಿನ ಸಂಖ್ಯೆ 17 ಆಗಿವೆ. ಈ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಪಿತ್ರಾರ್ಜಿತ ಸ್ವತ್ತುಗಳು ಇರುವುದಿಲ್ಲ.

ನರಸಮ್ಮ ರವರ ಹುಟ್ಟೂರು ಪುಟ್ಟಪುರ್ಲಹಳ್ಳಿ . ಈ ದಾವೆಯಲ್ಲಿ ನರಸಮ್ಮ ರವರ ಹುಟ್ಟೂರು ಪುಟ್ಟಪುರ್ಲಹಳ್ಳಿ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯು ಹುದುಗೂರು ಗ್ರಾಮದಲ್ಲಿ ಸುಮಾರು 60 ವರ್ಷಗಳಿಂದ ವಾಸವಾಗಿದ್ದರು.

ರಂಗಪ್ಪ ಮತ್ತು ನಾಗಪ್ಪ ರವರ ಹೆಸರಿನಲ್ಲಿ ಸ್ವತ್ತುಗಳು ಇರುವುದರ ಬಗ್ಗೆ ದಾಖಲೆಗಳನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ನಿಪಿ-3 ಕೈ ಬರವಣಿಗೆಯ ಪಹಣಿ ಪ್ರತಿಯ ಕಾಲಂ ನಂಬರ್ 9 ರಲ್ಲಿ ರಂಗಪ್ಪ ಎಂದು ನಮ್ಮ ತಾತನ ಹೆಸರು ನಮೂದಾಗಿದೆ ಎಂದು ಸಾಕ್ಷಿಯು ನಿಪಿ-3 ನ್ನು ನೋಡಿ ನುಡಿಯುತ್ತಾರೆ. ಸ್ವತ್ತು ರಂಗಪ್ಪ ಮತ್ತು ನಾಗಪ್ಪ ರವರಿಗೆ ಬಂದಿರುವ ಬಗ್ಗೆ ಇತರೆ ದಾಖಲೆಗಳನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು

ನವೀನ್ ಕುಮಾರ್ ಆರ್

ನುಡಿಯುತ್ತಾರೆ. ನಿಪಿ–3 ರಲ್ಲಿ ನಾನು ಹೇಳಿದ ಆಗೆ ರಂಗಪ್ಪ ರವರ ಹೆಸರು ನಮೂದಾಗಿಲ್ಲ ಎಂದರೆ ಸರಿಯಲ್ಲ.

ನಮ್ಮ ಮನೆಯಲ್ಲಿ ವಾದಿ, ನನ್ನ ಅಪ್ಪ ಅಮ್ಮ, ನನ್ನ ತಮ್ಮ, ನನ್ನ ಹೆಂಡತಿ ಹಾಗೂ ಮಕ್ಕಳು ವಾಸವಾಗಿದ್ದಾರೆ. ನನ್ನ ಅಪ್ಪನ ಹೆಸರು ರವಿಕುಮಾರ್. ನನ್ನ ತಂದೆ ಕೂಡ ಈ ದಾವೆಯಲ್ಲಿ 3 ನೇ ಪ್ರತಿವಾದಿಯಾಗಿದ್ದಾರೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸಲು ದಾಖಲೆಗಳನ್ನು ನನ್ನ ಅಜ್ಜಿಯ ಪರವಾಗಿ ನಾನೇ ಒದಗಿಸಿರುತ್ತೇನೆ. ನಿಪಿ–2 ನ್ನು ನನ್ನ ತಂದೆ ಸಲ್ಲಿಸಿರುತ್ತಾರೆ.

ಹುದುಗೂರಿನಲ್ಲಿರುವ ಮನೆ ಸ್ವಂತದ್ದು. ಜೀವನೋಪಯಕ್ಕೆ ವ್ಯವಸಾಯವನ್ನು ಅವಲಂಬಿಸಿದ್ದೇವೆ. ಹುದುಗೂರಿನಲ್ಲಿ ಇತರೆ ನಮಗೆ ಸೇರಿದ ಜಮೀನಗಳಿವೆ ಎಂದರೆ ಸರಿ. ಸದರಿ ಸ್ವತ್ತುಗಳು ನನ್ನ ತಂದೆ 3 ನೇ ಪ್ರತಿವಾದಿಯ ಹೆಸರಿನಲ್ಲಿವೆ. ಸದರಿ ಸರ್ವೆ ನಂಬರ್ ಗಳ ವಿವರ ಗೊತ್ತಿಲ್ಲ. ತಹಶೀಲ್ದಾರ್ ರವರ ಕಚೇರಿಯಿಂದ ಪಡೆದ ವಂಶವೃಕ್ಷದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರಲಿಲ್ಲ. ಹನುಮಂತಪ್ಪ, ವೆಂಕಟಮ್ಮ ಮತ್ತು ಲಕ್ಷ್ಮಿದೇವಮ್ಮ ರವರ ಮರಣ ಪತ್ರ ಗಳನ್ನು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಹಾಜರುಪಡಿಸಲಾಗುವುದಿಲ್ಲ ಎಂದು ನುಡಿಯುತ್ತಾರೆ. ರಂಗಪ್ಪ ರವರ ಮರಣ ಪ್ರಮಾಣಪತ್ರ ನನ್ನ ಬಳಿ ಇಲ್ಲ . ರಂಗಪ್ಪ, ವೆಂಕಟಮ್ಮ ಮತ್ತು ಹನುಮಂತಪ್ಪ ರವರ ಮರಣದ ದಿನಾಂಕವು ಸಹ ನನಗೆ ಗೊತ್ತಿಲ್ಲ.

ನವೀನ್ ಕುಮಾರ್ ಆರ್

ನರಸಮ್ಮ ರವರ ಗಂಡನ ಮನೆ ಹುದುಗೂರು ಗ್ರಾಮಕ್ಕೆ ಸೇರಿದೆ. ನಾನು ಮತ್ತು 2 ನೇ ಪ್ರತಿವಾದಿ ವಾರಸುದಾರರು ಜೊತೆಯಲ್ಲಿರುವ ಬಗ್ಗೆ ವಂಶವೃಕ್ಷ ಹೊರತುಪಡಿಸಿದ ದಾಖಲೆಯನ್ನು ಹಾಜರುಪಡಿಸಿಲ್ಲ. ನನಗೂ, ಮೃತ 2 ನೇ ಪ್ರತಿವಾದಿ ಕುಟುಂಬಕ್ಕೂ ಯಾವುದೇ ಸಂಬಂಧವಿಲ್ಲದಿದ್ದರು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

ನನ್ನ ತಂದೆ 3 ನೇ ಪ್ರತಿವಾದಿ ಅಸಲು ದಾವಾ ಸಂಖ್ಯೆ 221/2011 ರಂತೆ 2 ನೇ ಪ್ರತಿವಾದಿಯ ಮೇಲೆ ಒಂದು ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯು ದಿನಾಂಕ 26.03.2014 ರಂದು ವಜಾಗೊಂಡಿತ್ತು ಎಂದರೆ ಸಾಕ್ಷಿಯು ಆ ದಾವೆಗೂ ನಮಗೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ಸದರಿ ಮೇಲೆ ಹೇಳಿದ ಆದೇಶವನ್ನು 3 ನೇ ಪ್ರತಿವಾದಿ ನನ್ನ ತಂದೆಯು ಮುಚ್ಚಿಟ್ಟು ಈ ದಾವೆಯನ್ನು ನನ್ನಿಂದ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನರಸಮ್ಮ ರವರ ಕುಟುಂಬಕ್ಕೂ ಹಾಗೂ 2 ನೇ ಪ್ರತಿವಾದಿಯ ಕುಟುಂಬಕ್ಕೂ ಪರಸ್ಪರ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾವು ಮೂಲತಃ ಹುದುಗೂರು ಗ್ರಾಮದವರಾಗಿದ್ದು, ಪುಟ್ಟಪುರ್ಲಹಳ್ಳಿಯಲ್ಲಿರುವ ಸ್ವತ್ತಿಗೆ ಸಂಬಂಧಿಸಿದಂತೆ ಸುಳ್ಳು ದಾವೆಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ರಂಗಪ್ಪ ರವರಿಗೆ ಹನುಮಂತಪ್ಪ ಮತ್ತು ನರಸಮ್ಮ ಎಂಬ ಮಕ್ಕಳಿರುವುದಾಗಿ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಾನು ವಂಶವೃಕ್ಷದಲ್ಲಿ ನಮೂದಿಸಿರುವ ಹನುಮಂತಪ್ಪ ಹಾಗೂ 2 ನೇ ಪ್ರತಿವಾದಿಯ ತಂದೆ ಹನುಮಂತಪ್ಪ ಬೇರೆ ಬೇರೆ

ನವೀನ್ ಕುಮಾರ್ ಆರ್

ಎಂದರೆ ಸರಿಯಲ್ಲ. ನನ್ನ ತಂದೆ ನಿಪಿ–2 ನ್ನು ಸೃಷ್ಟಿ ಮಾಡಿ ಈ ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ–6 ರಲ್ಲಿ ಮಂಜಮ್ಮ ಕೋಂ ರಂಗಸ್ವಾಮಿ ಎಂಬ ಹೆಸರು ನಮೂದಾಗಿದ್ದು, ಅವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆಯೇ ಎಂದರೆ ಸಾಕ್ಷಿಯು ಸೇರಿಸಿಲ್ಲ ಎಂದು ನುಡಿಯುತ್ತಾರೆ. ನಿಪಿ–7 ದಾಖಲೆಯನ್ನು ಸಹ ನನ್ನ ತಂದೆಯು ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ. ನಿಪಿ–7 ದಾಖಲೆಯನ್ನು ದಾವೆಯಲ್ಲಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ–3 ರ ಕಾಲಂ 9 ರಲ್ಲಿ ರಂಗಪ್ಪ ಬಿನ್ ಚಿಕ್ಕದಾಸಪ್ಪ ಎಂಬ ಹೆಸರು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿರುವ ನಿಪಿ–5 ರಲ್ಲಿ ರಂಗಪ್ಪ ಬಿನ್ ಚಿಕ್ಕದಾಸಪ್ಪ ಎಂಬ ಹೆಸರು ಇದೆ ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇದೆ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗೌರಿಬಿದನೂರು